

## ಪ್ರಶಸ್ತಿ– ಪುರಸ್ಕಾರ

1983– ‘ಸುಧಾ’ ಯುಗಾದಿ ಕಾದಂಬರಿ ಸ್ಪರ್ಧೆಯಲ್ಲಿ ಮುಳುಗಡೆ ಕಾದಂಬರಿಗೆ ಪ್ರಥಮ ಬಹುಮಾನ. ರೂ.15ಸಾವಿರ.

1990– ಕಾಡಿನ ಬೆಂಕಿ ಚಲನಚಿತ್ರವಾಗಿ ರಜತ ಕಮಲ ಹಾಗೂ ರಾಜ್ಯಪ್ರಶಸ್ತಿ.

2006– ದ್ವೀಪ ಚಲನಚಿತ್ರವಾಗಿ ಸ್ವರ್ಣ ಕಮಲ ಹಾಗೂ ರಾಜ್ಯ ಪ್ರಶಸ್ತಿ.

2011– ‘ಮುಳುಗಡೆ ಊರಿಗೆ ಬಂದವರು’ ಮಕ್ಕಳ ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಬಾಲ ಸಾಹಿತ್ಯ ಪುರಸ್ಕಾರ.

ಜತೆಗೆ ಕುವೆಂಪು ವಿಶ್ವವಿದ್ಯಾಲದಯ ಗೌರವ ಡಾಕ್ಟರೇಟ್, ಎರಡು ಬಾರಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಒಮ್ಮೆ ರಾಜ್ಯೋತ್ಸವ ಪ್ರಶಸ್ತಿ. ಹಂಪಿ, ಕನ್ನಡ ವಿಶ್ವವಿದ್ಯಾಲಯ, ಕುವೆಂಪು ವಿಶ್ವವಿದ್ಯಾಲಯದ, ವಿವಿಧ ಅಕಾಡೆಮಿಗಳ ಸದಸ್ಯರಾಗಿಯೂ ನಾ.ಡಿಸೋಜ ಕೆಲಸ ಮಾಡಿದ್ದಾರೆ.

## ಪಠ್ಯಪುಸ್ತಕಗಳು

‘ಮುಳುಗಡೆ’ – ಕುವೆಂಪು ವಿಶ್ವವಿದ್ಯಾಲಯ, ಪದವಿ ತರಗತಿಗಳಿಗೆ (1997–98),

ಮಂಗಳೂರು ವಿಶ್ವವಿದ್ಯಾಲಯ, ಬಿ.ಕಾಂ.ತರಗತಿಗೆ (2007–09).

ಕೊಳಗ– ಬೆಂಗಳೂರು ವಿಶ್ವವಿದ್ಯಾಲಯ, ಬಿ.ಎ.ತರಗತಿಗೆ (2003–05).

ಪಠ್ಯಪುಸ್ತಕಗಳಲ್ಲಿ ಸೇರ್ಪಡೆಗೊಂಡ ಸಣ್ಣಕಥೆಗಳು

ಒಳಿತನ್ನು ಮಾಡಲು ಬಂದವರು– ಬೆಂಗಳೂರು ವಿ.ವಿ. (1982–83).

ಬಣ್ಣ– ಕರ್ನಾಟಕ ವಿ.ವಿ. ಧಾರವಾಡ (2003–04).

ಪಾದರಿಯಾಗುವ ಹುಡುಗ– ಕುವೆಂಪು ವಿ.ವಿ. ಶಿವಮೊಗ್ಗ (2006–07.

ಉಬ್ಬರು ಮಾಜಿಗಳು (ಹಿಂದಿ)–ಮಂಗಳೂರು ವಿ.ವಿ.ಮಂಗಳೂರು (2007–08).

ಅಲ್ಲಿದ್ದವರನ್ನು ಹೊರಗೆ ಹಾಕಬೇಕು ಎಂಬುದು ವಿದೇಶಿ ಕಲ್ಪನೆ. ಕಾಡಿನಿಂದ ಹಣ ಮಾಡಲು ಹೊರಟಾಗ ಸಮಸ್ಯೆಗಳು ಆರಂಭವಾದವು. ಜನರಿಗೆ ಕಾಡು ಕಡಿದು ಜಮೀನು ಮಾಡುವ ದಾಹ ಜಾಸ್ತಿಯಾಯಿತು. ಇಂತಹ ಕಡೆಗಳಲ್ಲಿ ಈ ನೆಲಕ್ಕೆ ಪರಿಚಿತವಲ್ಲದ ರಬ್ಬರ್, ಶುಂಠಿ, ಹತ್ತಿ ಬೆಳೆಯಲು ಪ್ರೋತ್ಸಾಹಿಸಲಾಯಿತು. ಮನುಷ್ಯನ ದುರಾಸೆಗೆ ತಡೆ ಹಾಕುವ ಕೆಲಸ ಆಗಲೇಬೇಕು. ಉತ್ತರಖಂಡದಲ್ಲಿ ಪ್ರಕೃತಿ ಹೇಗೆ ಮನುಷ್ಯ ವಿರುದ್ಧ ಬಿತ್ತು; ಅದೇ ಪರಿಸ್ಥಿತಿ ಮಲೆನಾಡಿನಲ್ಲಿ ಆಗದಂತೆ ಎಚ್ಚರ ವಹಿಸುವುದು ಒಳಿತು.

★ *ಅಧ್ಯಾಪಕರು ಸೃಷ್ಟಿಸುವ ಸಾಹಿತ್ಯಕ್ಕೆ ಚಲನಶೀಲತೆ ಇರುವುದಿಲ್ಲ ಎಂಬ ಮಾತುಗಳಿವೆಲ್ಲ?*

ನಾಡಿ: ಅರ್ಧ ಸತ್ಯ ಇದು. ಪಾಠ ಮಾಡುವುದಕ್ಕಾಗಿಯೇ ಸಾಹಿತ್ಯ ಅಧ್ಯಯನ ಮಾಡುವವರಿಂದ ಸೃಷ್ಟಿಯಾದ ಸಾಹಿತ್ಯದಲ್ಲಿ ಅಷ್ಟೊಂದು ವೈವಿಧ್ಯತೆ ಇರುವುದಿಲ್ಲ ಎಂಬುದು ನಿಜ. ಅನುಭವಗಳ ಮೂಲಕ ಬರೆಯುವವರ ಸಾಹಿತ್ಯ ಸಾಕಷ್ಟು ಅನನ್ಯವಾಗಿರುತ್ತದೆ. ಸಾಹಿತ್ಯವನ್ನು ಮನೋರಂಜನೆ ಮತ್ತು ಜ್ಞಾನಾರ್ಜನೆಗಾಗಿ ಓದಿ, ಬರೆಯುವವರ ಸಾಹಿತ್ಯ ವಿಶೇಷವಾಗಿರುತ್ತದೆ ಎನ್ನುವುದು ಸತ್ಯ. ಸಾಹಿತ್ಯ ಬೆಳೆಯುವುದು ಬದುಕಿನ ವಿವಿಧ ಮುಖಗಳನ್ನು ಬಿಂಬಿಸಿದಾಗ ಮಾತ್ರ. ವೈದ್ಯರು, ಚಾಲಕರು, ಹೀಗೆ ಸಮಾಜದ ಬೇರೆ ಬೇರೆ ವಲಯಗಳಿಂದ ಸಾಹಿತ್ಯ ಬರಬೇಕು.

★ *‘ಆತ್ಮಕಥೆ’ ಬರೆಯುವ ಯೋಚನೆ ಇದೆಯೇ?*

ನಾಡಿ: ಈಗಾಗಲೇ ನನ್ನ ಬದುಕಿನ ಒಳನೋಟಗಳನ್ನು ‘ಬುತ್ತಿ’ ಎನ್ನುವ ಕೃತಿಯಲ್ಲಿ ಬರೆದಿದ್ದೇನೆ. ಮತ್ತೆ ಬರೆದರೆ ಅದು ಪುನರಾವರ್ತನೆಯಾಗುತ್ತದೆ. ■